**ಸಾಕ್ಷಿದಾರರನ್ನು ದಿನಾಂಕಃ 26.03.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ GNN ರವರಿಂದಃ**

1 ನೇ ಪ್ರತಿವಾದಿ ನನ್ನ ತಾಯಿ ತೀರಿಕೊಂಡು ಒಂದು ವರ್ಷ ಆಗಿರುತ್ತದೆ. ದಾವಾ ಐಟಂ ನಂ-1 ಸ.ನಂ.29/1 ವಿಸ್ತೀರ್ಣ 4 ಎಕರೆ 31 ಗುಂಟೆ ಜಮೀನು ಮೂಲತಃ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ.

ದಾವಾ ಐಟಂ ನಂಬರ್ 2 ಸ.ನಂ.67 ವಿಸ್ತೀರ್ಣ 3 ಎಕರೆ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿಯು ನನ್ನ ತಂದೆ ಸಣ್ಣಮಾದಯ್ಯರವರಿಗೆ ಸೇರಿದ್ದು ಎಂದು ನುಡಿಯುತ್ತಾರೆ. ನನ್ನ ತಂದೆಗೆ ನಾನು ಸೇರಿದಂತೆ ಒಟ್ಟು ಆರು ಜನ ಮಕ್ಕಳು ನಾಲ್ಕು ಜನ ಗಂಡು ಮಕ್ಕಳು, ಎರಡು ಜನ ಹೆಣ್ಣು ಮಕ್ಕಳು. ನಾಲ್ಕು ಜನ ನನ್ನ ಸಹೋದರರು ಈಗ ತೀರಿಕೊಂಡಿರುತ್ತಾರೆ.

ದಾವಾ ಐಟಂ ನಂ.1 ರ ಆಸ್ತಿಯು ನನ್ನ ತಂದೆಗೆ ಮಂಜೂರಾಗಿರುತ್ತದೆ. ನನ್ನ ತಾಯಿ ನನ್ನ ಜೊತೆ ವಾಸ ಇದ್ದರು. ದಾವಾ ಆಸ್ತಿಗಳನ್ನು ನನ್ನ ಸಹೋದರರು ಅವರು ಬದುಕಿದ್ದಾಗಲೆ ಎಂ.ಆರ್.5/1992-93 ರಲ್ಲಿ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಜಂಟಿ ಖಾತೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.2 ರ ಆಸ್ತಿ ಸ.ನಂ.67 ವಿಸ್ತೀರ್ಣ 3 ಎಕರೆ ಜಮೀನು 2 ನೇ ಪ್ರತಿವಾದಿಯ ಗಂಡ ಹಾಗೂ 3 ರಿಂದ 6 ನೇ ಪ್ರತಿವಾದಿಯರ ತಂದೆ ಪುಟ್ಟಮಾದಯ್ಯ ರವರ ಹೆಸರಿಗೆ ಮಂಜೂರಾಗಿರುತ್ತದೆ ಎಂದರೆ ಸರಿ . ಸಾಕ್ಷಿಯು ಮುಂದುವರಿದು ದಾವಾ ಐಟಂ ನಂ.2 ರ ಆಸ್ತಿಯಲ್ಲಿ ನನಗೆ ಯಾವುದೇ ಭಾಗ ಬೇಡ ಎಂದು ನುಡಿಯುತ್ತಾರೆ.

ಪ್ರತಿವಾದಿಯರಿಗೆ ಇನ್ನಿತರ ಸರ್ವೇ ನಂಬರ್ ಗಳಲ್ಲಿ ಜಮೀನುಗಳು ಮಂಜೂರಾಗಿದ್ದು ಅವರು ಸ್ವಾಧೀನ ಇದ್ದು ಸದರಿ ಆಸ್ತಿಗಳನ್ನು ನಾನು ಈ ದಾವೆಯಲ್ಲಿ ತಂದಿಲ್ಲ ಎಂದರೆ ಸಾಕ್ಷಿಯು ಆ ಆಸ್ತಿಗಳಲ್ಲಿ ನನಗೆ ಯಾವುದೇ ಭಾಗ ಬೇಡ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇಲ್ಲಃ**

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**